# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 726**
**ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ**
**(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ : 21.08.2026**
**ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಬೀಜ ನಿಗಮ (NSCL)ದ ಜಮೀನು ಸೇರಿದಂತೆ ತುಂಗಭದ್ರಾ ಎಡದಂಡೆ ಕಾಲುವೆಯ D-54 ರಲ್ಲಿನ ಕೊನೆಯ ಭಾಗದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಉದ್ದೇಶದಿಂದ ಸಿಂಧನೂರು ತಾಲ್ಲೂಕಿನಲ್ಲಿರುವ NSCL ಅಧೀನದ 500 ಎಕರೆ ಜಮೀನಿನಲ್ಲಿ Impounding reservoir ಅನ್ನು ನಿರ್ಮಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ; | ತುಂಗಭದ್ರಾ ಎಡದಂಡೆ ಕಾಲುವೆಯ ವಿತರಣಾ ಕಾಲುವೆ 54 ರಲ್ಲಿನ ಕೊನೆಯ ಭಾಗದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಉದ್ದೇಶದಿಂದ ಸಿಂಧನೂರು ತಾಲ್ಲೂಕಿನಲ್ಲಿರುವ ರಾಷ್ಟ್ರೀಯ ಬೀಜ ನಿಗಮ (NSCL) ಅಧೀನದ 500 ಎಕರೆ ಜಮೀನಿನಲ್ಲಿ Impounding Reservoir ಅನ್ನು ನಿರ್ಮಿಸುವ ಯೋಜನೆಯ ರೂ.399.20 ಕೋಟಿಗಳ ವಿಸ್ತೃತ ಯೋಜನಾ ವರದಿಯನ್ನು ದಿನಾಂಕ:09.03.2026 ರಂದು ನಡೆದ ಅಂದಾಜು ಪರಿಶೀಲನಾ ಸಮಿತಿಯ 121ನೇ ಸಭೆಯಲ್ಲಿ ಮಂಡಿಸಿ, ತೀರುವಳಿ ಪಡೆಯಲಾಗಿದ್ದು, ಮುಂಬರುವ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಿಸಲು ಕ್ರಮವಹಿಸಲಾಗುತ್ತಿದೆ.<br><br>ಸದರಿ ಯೋಜನೆಗೆ ಅವಶ್ಯವಿರುವ NSCL ಸಂಸ್ಥೆಯ ಸುಮಾರು 500 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳಲು ಸಿಂಧನೂರು ವಿಭಾಗದ ಜವಳಗೇರಾ ಉಪವಿಭಾಗ ಕಛೇರಿಯಿಂದ ದಿನಾಂಕ:04.02.2026 ರಂದು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರಿಂದ ದಿನಾಂಕ:17.02.2026 ರಂದು ರಾಷ್ಟ್ರೀಯ ಬೀಜ ನಿಗಮ (NSCL)ಕ್ಕೆ ಪತ್ರಗಳನ್ನು ಬರೆಯಲಾಗಿದ್ದು, ಪ್ರತಿಕ್ರಿಯೆ ನಿರೀಕ್ಷಿಸಲಾಗಿದೆ. |
| ಆ) | NSCL ಅಧೀನದ 500 ಎಕರೆ ಜಮೀನಿನಲ್ಲಿ Impounding reservoir ಅನ್ನು ನಿರ್ಮಿಸುವ ಕುರಿತು ಅನುಮೋದನೆಗಾಗಿ ರಾಜ್ಯ ಸರ್ಕಾರದಿಂದ ದಿ:10.07.2025 ರಂದು NSCL ಗೆ ಬರೆದ ಪತ್ರದ ಕುರಿತು ಯಾವ ಕ್ರಮಕ್ಕೆಗೊಳ್ಳಲಾಗಿದೆ ; | |
| ಇ) | ಯಾವ ಕಾಲಮಿತಿಯೊಳಗೆ ಸರ್ಕಾರವು NSCLನ ಮುಖ್ಯಸ್ಥರೊಂದಿಗೆ ಚರ್ಚಿಸಿ, ಅಗತ್ಯ ಭೂಮಿಯನ್ನು ಪಡೆದು ಈ ಯೋಜನೆಯನ್ನು ಪೂರ್ಣಗೊಳಿಸುತ್ತದೆ? | |

**ಜಸಂಇ 96 ಎಂಎಲ್ಎ 2026**

(ಎನ್. ಚೆಲುವರಾಯಸ್ವಾಮಿ)
**ಜಲಸಂಪನ್ಮೂಲ ಸಚಿವರು**